6. ನಿಲುವಳಿ ಸೂಚನೆ :

ವಿಷಯ : ರಾಜ್ಯದಲ್ಲಿ ಬರಗಾಲದ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಭೀಕರವಾದ ಬರಗಾಲ ಇದೆಯೆಂದು ಸರ್ಕಾರವೇ ಒಪ್ಪಿದೆ. ಕರ್ನಾಟಕದ ಸುಮಾರು 24 ಜಿಲ್ಲೆಗಳ 124 ತಾಲ್ಲೂಕುಗಳಲ್ಲಿ ಬರಗಾಲವಿದೆ ಎಂದು ಸರ್ಕಾರವೇ ಘೋಷಣೆ ಮಾಡಿದೆ. ಇದರ ಬಗ್ಗೆ ಎರಡು ಸಾರಿ ಸದನದಲ್ಲಿ ಚರ್ಚೆ ಮಾಡಿದ್ದೇನೆ. ಎರಡು ಬಾರಿ ಚರ್ಚಿಸಿದರೂ ಒಂದು ಬಾರಿ ಸರ್ಕಾರ ಉತ್ತರ ಕೊಟ್ಟಿತ್ತು. ಎರಡನೇ ಬಾರಿಗೆ ಸರ್ಕಾರ ಉತ್ತರ ಕೊಡಲಿಲ್ಲ. ಚರ್ಚೆಯೂ ಪೂರ್ಣವಾಗಲಿಲ್ಲ, ಉತ್ತರವೂ ಕೊಡಲಿಲ್ಲ. ತಮಗೆ ಏಕೆ ಕೊಡಲಿಲ್ಲವೆಂಬುದು ಗೊತ್ತಿದೆ. ಕೆಲವು ಮಂತ್ರಿಗಳು ಬ್ಲೂಫಿಲಂ ನೋಡುತ್ತಿದ್ದರು ಹೀಗಾಗಿ ಅದು ಚರ್ಚೆಯಾಗಲಿಲ್ಲ. ನೀವು ಸದನ ಮುಂದಕ್ಕೆ ಹಾಕಿಬಿಟ್ಟಿರಿ. ಆದ್ದರಿಂದ ಅದಕ್ಕೆ ಉತ್ತರವೂ ಸಿಗಲಿಲ್ಲ, ಪರಿಹಾರವೂ ಸಿಗಲಿಲ್ಲ. ನಾನು ಈಗಾಗಲೇ ಇಲ್ಲಿ ಬಹಳ ದೀರ್ಘವಾಗಿ ಬರಗಾಲದ ಬಗ್ಗೆ ಎರಡು ಗಂಟೆಗಳ ಕಾಲ ಮಾತನಾಡಿದ್ದೇನೆ. ನಾನೀಗ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ ಬೇರೆಯವರು ಈ ಬಗ್ಗೆ ಮಾತನಾಡುತ್ತಾರೆ. ಆದರೆ, ಈ ಪರಿಸ್ಥಿತಿ ಮಾತ್ರ ಬಹಳ ಗಂಭೀರವಾಗಿದೆ. ಸರ್ಕಾರವೇ ಒಪ್ಪಿಕೊಂಡಿರುವ ಪ್ರಕಾರ ಮಳೆ ಈ ಸಾರಿ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಬರಲಿಲ್ಲ. ಸರಾಸರಿ ಮಳೆಗಿಂತ minus 20% ಮಳೆ ಕಡಿಮೆಯಾಯಿತು ಅದಕ್ಕಿಂತ ಹೆಚ್ಚಾಗಿ ರಾಜ್ಯದಲ್ಲಿ ನಾಲ್ಕುವಾರಗಳಿಗಿಂತ ಹೆಚ್ಚಾಗಿ ಒಣಹವೆ ಇತ್ತು ಎಂದು ಒಪ್ಪಿಕೊಂಡಿದ್ದಾರೆ. ಕರ್ನಾಟಕ ಜನರ ದುರಾದೃಷ್ಟವೋ ಏನೋ ಗೊತ್ತಿಲ್ಲ 2001 ರಿಂದ ಸತತವಾಗಿ 2010 ರಲ್ಲಿ ಸ್ವಲ್ಪ ತೊಂದರೆ ಕಡಿಮೆಯಾಯಿತು. ಅಲ್ಲಿಂದ ಇವತ್ತಿನವರೆಗೆ ಪ್ರವಾಹ ಇಲ್ಲವೇ ಬರಗಾಲ. 2009ರ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ ಭಾರಿ ಪ್ರವಾಹ ಬಂದು ಬಿಟ್ಟಿತು. ನೂರು ವರ್ಷಗಳಲ್ಲಿ ಕಾಣದಿರುವಷ್ಟು ಪ್ರವಾಹ ಬಂತು. ನಲವತ್ತು ವರ್ಷಗಳಲ್ಲಿ ಒಂದು ಸಾರಿನೋ ಎರಡು ಸಾರಿನೋ ಈ ತರಹ ಬರಗಾಲ ಆಗಿದೆ ಎಂದು ಸರ್ಕಾರವೇ ಉತ್ತರ ಕೊಟ್ಟಿದೆ. ಇಷ್ಟು ಗಂಭೀರವಾದ ಪರಿಸ್ಥಿತಿ ಹಿಂದೆ ಆಗಿರಲಿಲ್ಲ ಅಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ ಎಂದು ಸರ್ಕಾರ ಒಪ್ಪಿದೆ. ಕರ್ನಾಟಕದಲ್ಲಿ ಮೇವಿನ ಮೇಲೆ ಅವಲಂಬನೆಯಾಗಿರತಕ್ಕಂಥ ಸುಮಾರು ಒಂದೂವರೆ ಕೋಟಿ ಜಾನುವಾರುಗಳಿವೆ. ಬರಗಾಲ ಬಂದ

ಮೇಲೆ ಅವುಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ, ತಿನ್ನುವುದಕ್ಕೆ ಮೇವು ಇಲ್ಲ, ಪಾಪ ಜನರು ಅವುಗಳನ್ನು ಸಾಕುವುದಕ್ಕೆ ಆಗದೇ ಮೇವಿನ ಕೊರತೆಯಿಂದ ಕುಡಿಯುವ ನಿರಿನ ಕೊರತೆಯಿಂದ throw-away prices ಗೆ ಮಾರಾಟ ಮಾಡಿ ಬಿಡುತ್ತಿದ್ದಾರೆ. ಇಲ್ಲಾ ಸಂತೆಗೆ ಹೊಡೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ, ಇಲ್ಲಾ ಕಸಾಯಿಖಾತೆಗೆ ಹೊಡೆದುಕೊಂಡು ಹೋಗಿ ಕೊಟ್ಟುಬಿಡುತ್ತಾರೆ. ಮಾನ್ಯ ಅಧ್ಯಕ್ಷರೆ ಇವತ್ತು ಒಂದು ಜೊತೆ ಉಳುಮೆ ಮಾಡುವ ಎತ್ತುಗಳು ಎಂದರೆ ಕನಿಷ್ಠ ಐವತ್ತು ಸಾವಿರ ರೂಪಾಯಿಗಿಂತ ಕಡಿಮೆಯಿರುವುದಿಲ್ಲ. ಕಸಾಯಿ ಖಾನೆಗೆ ಹೊಡೆಯುವ ಎತ್ತುಗಳು ಅವು ಬೇರೆ ಇರುತ್ತವೆ. ಆದರೆ, ಉಳುಮೆ ಮಾಡಲಿಕ್ಕೆ ಎತ್ತಿನ ಗಾಡಿ ಎಳೆಯತಕ್ಕಂಥ ಎತ್ತುಗಳಿಗೆ ಐವತ್ತು ಸಾವಿರ ರೂಪಾಯಿಗಿಂತ ಕಡಿಮೆ ಯಾವ ಎತ್ತುಗಳೂ ಇರುವುದಿಲ್ಲ. ಇವತ್ತು ಒಂದರಿಂದ ಎರಡು ಲಕ್ಷ ರೂಪಾಯಿ ಬೆಲೆ ಬಾಳುವ ಎತ್ತುಗಳಿವೆ. ನೀವು ಸಂತೆಯಲ್ಲಿ ನೋಡಿರಬೇಕು. ಮೊನ್ನೆ ಯಾವುದೋ ಒಂದು ಜಾತ್ರೆಯಲ್ಲಿ ಅಮೃತ್ ಮಹಲ್ ಎತ್ತುಗಳು, ಹಳ್ಳಿಕಾರ್ ಎತ್ತುಗಳು ಒಂದು ಜೊತೆಗೆ ಎರಡೂವರೆ ಲಕ್ಷ ರೂಪಾಯಿಗಳಿಗೆ ಮಾರಾಟವಾಗಿವೆ. ಚುಂಚನಕಟ್ಟೆನಲ್ಲಿ ಮತ್ತೆ ರಾಮನಗರ ಜಾತ್ರೆಯಲ್ಲಿ ಮಾರಾಟವಾಗಿವೆ. ಅಷ್ಟು ಬೆಲೆಬಾಳುವ ಎತ್ತುಗಳನ್ನು ತೆಗೆದುಕೊಂಡಿರುವಂಥ ರೈತರಿಗೆ ಈ ತರಹ ಬರಗಾಲದಲ್ಲಿ ಅವುಗಳಿಗೆ ಮೇವು ಇಲ್ಲದೆ ಹೋದರೆ ಅವುಗಳಿಗೆ ಕುಡಿಯುವುದಕ್ಕೆ ನೀರು ಇಲ್ಲದೇ ಹೋದರೆ ಅನಿವಾರ್ಯವಾಗಿ ಅವರು ಮಾರಾಟ ಮಾಡಬೇಕಾಗುತ್ತದೆ. ಎಲ್ಲಾ ಕಡೆ ಪತ್ರಿಕೆಗಳಲ್ಲಿ ದಿನನಿತ್ಯ ಜಾನುವಾರುಗಳು ಕಸಾಯಿಖಾನೆಗಳಿಗೆ ಹೋಗುತ್ತಿವೆ, ಜಾನುವಾರುಗಳು ಸಂತೆಯಲ್ಲಿ throw-away prices ಗೆ ಮಾರಾಟವಾಗುತ್ತಿವೆ ಎಂದು ಬರುತ್ತದೆ. ಪಾಪ ಇವತ್ತು ರೈತರು ಮಾರಾಟ ಮಾಡಿ ಕೈ ತೊಳೆದುಕೊಂಡು ಬಿಡುತ್ತಾರೆ. ಇದರಿಂದ ವ್ಯವಸಾಯ ಏನಾಗುತ್ತದೆ? ಅವರು ಇನ್ನೊಂದು ಸಾರಿ ಎತ್ತುಗಳನ್ನು ತೆಗೆದುಕೊಳ್ಳಬೇಕಾದರೆ ಅವರ ಹತ್ತಿರ ಹಣ ಎಲ್ಲಿ ಇರುತ್ತದೆ? ಮೊದಲೇ ಬೆಳೆಯಿಲ್ಲ, ಬೆಳೆಯಿಲ್ಲದೇ ಕಷ್ಟಕ್ಕೊಳಗಾಗಿರುತ್ತಾರೆ, ಮೊದಲೇ ಸಾಲಗಾರರಾಗಿರುತ್ತಾರೆ. ಬಿತ್ತನೆಗೆ, ಗೊಬ್ಬರಕ್ಕಾಗಿ ಮತ್ತು ಉಳುಮೆ ಮಾಡುವುದಕ್ಕೆ ಹಾಗೂ ಔಷಧಿ ಹೊಡೆಯುವುದಕ್ಕೆ ಅವರು ಸಾಲ ಮಾಡಿರುತ್ತಾರೆ. ಇವತ್ತಿನ ದಿವಸ ಅತ್ಯಂತ ಸಂಕಷ್ಟಕ್ಕೆ ಒಳಗಾಗಿರತಕ್ಕಂಥ ಯಾವುದಾದರು ವರ್ಗ ಇದ್ದರೆ ಅದು ರೈತಾಪಿ ಮತ್ತು ಕೂಲಿ ಕಾರ್ಮಿಕರ

ವರ್ಗ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ರೈತರು ಏಕೆ ಆತ್ಮಹತ್ಯೆಗೆ ಹೋಗುತ್ತಿದ್ದಾರೆ?

ಅಧ್ಯಕ್ಷರು : ತಾವು ಪ್ರಿಲಿಮನರಿಯಾಗಿ ಮಾತನಾಡುತ್ತಿದ್ದೀರಾ ಅಥವಾ ಚರ್ಚೆಯನ್ನು ಪ್ರಾರಂಭ ಮಾಡೋಣವೇ?

ಶ್ರೀ ಸಿದ್ದರಾಮಯ್ಯ : ಚರ್ಚೆ ಈಗ ಪ್ರಾರಂಭವಾಗಿದೆ.

ಅಧ್ಯಕ್ಷರು : ನಿಯಮ 60 ಅಥವಾ ನಿಯಮ 69 ರ ಅಡಿಯಲ್ಲಿ ಅಂದರೆ ಯಾವ ನಿಯಮದ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳ ಬೇಕೆಂಬುದನ್ನು ನೋಡಬೇಕಲ್ಲವೇ?

ಶ್ರೀ ಸಿದ್ದರಾಮಯ್ಯ : ನೀವು ನಿಯಮ 69ಕ್ಕೆ ಕನ್ವರ್ಟ್ ಮಾಡಿಲ್ಲವೇ?

ಅಧ್ಯಕ್ಷರು : ನಿಯಮ 69ಕ್ಕೆ ಕನ್ವರ್ಟ್ ಮಾಡುತ್ತೇನೆ. ತಾವು ಪ್ರಾರಂಭ ಮಾಡಿ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, ತಾವು ಇದರ ಬಗ್ಗೆ ಆದೇಶ ಮಾಡಿ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು ನೀಡಿರುವ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯ ಕುರಿತು ---

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, 125 ತಾಲ್ಲೂಕುಗಳಲ್ಲಿ ಬರಗಾಲ ಇದ್ದಂಥ ಸಂದರ್ಭದಲ್ಲಿ ಚರ್ಚೆ ಮಾಡಿದಾಗ ದೆಹಲಿಗೆ ನಿಯೋಗ ಕರೆದುಕೊಂಡು ಹೋಗುತ್ತೇನೆಂದು ಕಳೆದ ಸಾರಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ, ಇಲ್ಲಿಯವರೆಗೆ ದೆಹಲಿಗೆ ನಿಯೋಗ ಕರೆದುಕೊಂಡು ಹೋಗಲಿಲ್ಲ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಚರ್ಚೆ ಮಾಡಿ ಅವಶ್ಯಕತೆ ಇಲ್ಲವೆಂದು ಸುಮ್ಮನೆ ಇರುವುದಕ್ಕೆ ಹೋಗಬೇಡಿ. ಇಲ್ಲಿ ಚರ್ಚೆ ಮಾಡಿದ ಮೇಲೆ ಅದಕ್ಕೊಂದು ಪರಿಹಾರವನ್ನು ಕಂಡುಹಿಡಿದು ಕೊಡಿ. ಏಕೆಂದರೆ, 125 ತಾಲ್ಲೂಕುಗಳಲ್ಲಿ ಬರಗಾಲ ಬಂದಿರುವುದರಿಂದ ಅಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಆದ್ದರಿಂದ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲು ನಾವು ಕೇಳಿದ್ದೆವು. ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗೋಣವೆಂದು ಆ ಸಂದರ್ಭದಲ್ಲಿ ವಿಧಾನ ಸಭೆಯಲ್ಲಿ ಹೇಳಿದ್ದರು. ಮತ್ತೆ ಹೊರಗಡೆ ಸಹ ಹೇಳಿದ್ದರು. ಆದರೆ, ಅದರ ಬಗ್ಗೆ ಇವತ್ತಿನವರೆಗೆ ಒಂದು ಚಕಾರ ಎತ್ತಿಲ್ಲ ಎಂಬ ವಿಷಯವನ್ನು ನಿಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಪ್ರಾರಂಭಿಕವಾಗಿ ಪ್ರಸ್ತಾಪಿಸಿರುತ್ತಾರೆ. ಈ ವಿಚಾರವನ್ನು ನಿಯಮ 69ರ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬಹುದೆಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದಾರೆ. ಇವತ್ತಿನ ಕಾರ್ಯ ಕಲಾಪಗಳ ಪಟ್ಟಿಯಲ್ಲಿ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆಗೆ ಅವಕಾಶ ಇದೆ. ಆದರೆ, ಈ ವಿಷಯದ ಗಂಭೀರತೆಯನ್ನು ಪರಿಗಣಿಸಿ ವಿಷಯವನ್ನು ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅವಕಾಶ ನೀಡಿದೆ. ಮತ್ತೆ ಈಗಾಗಲೇ ಚರ್ಚೆ ಪ್ರಾರಂಭ ಮಾಡಬೇಕಾಗಿದೆ.

7. ನಿಯಮ 69ರ ಅಡಿಯಲ್ಲಿ ಚರ್ಚೆ :

ವಿಷಯ: ರಾಜ್ಯದಲ್ಲಿ ಬರಗಾಲದ ಬಗ್ಗೆ ಚರ್ಚೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದೀರೆಂದು ನಾನು ತಿಳಿದುಕೊಂಡಿದ್ದೆ.

ಅಧ್ಯಕ್ಷರು : ಏನೂ ತೊಂದರೆ ಇಲ್ಲ. ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಮಗೆಲ್ಲ ಗೊತ್ತಿರುವ ಹಾಗೆ ಕರ್ನಾಟಕ ರಾಜ್ಯದಲ್ಲಿ ಒಟ್ಟು ವ್ಯವಸಾಯಕ್ಕೆ ಯೋಗ್ಯವಾಗಿರುವಂಥ ಜಮೀನಿನಲ್ಲಿ ಸುಮಾರು 75% ಒಣ ಭೂಮಿ ಇದೆ. ಅಂದರೆ, ಮಳೆ ನೀರಿನ ಆಶ್ರಯದಲ್ಲಿ ಬೆಳೆ ಬೆಳೆಯತಕ್ಕಂಥ ಭೂಮಿ ಸುಮಾರು 75% ನಷ್ಟಿದೆ. ನಮ್ಮಲ್ಲಿ ಸಣ್ಣ ಹಿಡುವಳಿದಾರರು ಹೆಚ್ಚಿದ್ದಾರೆ. ಇವತ್ತಿನದಿವಸ marginal and small farmers ಜಾಸ್ತಿ ಜನ ಇದ್ದಾರೆ. ಕರ್ನಾಟಕ ರಾಜ್ಯದಲ್ಲಿ ಹಿಡುವಳಿ ಸರಾಸರಿ ಎಷ್ಟು ಬಂದಿದೆ ಎಂದರೆ, according to the Agriculture Census 2006 1.63 ಹೆಕ್ಟೇರ್‌ಗೆ ಬಂದಿದೆ. 1971ರಲ್ಲಿ 3.20 ಹೆಕ್ಟೇರ್ ಇದ್ದಂಥದು ಇವತ್ತಿನ ದಿವಸ ಹಿಡುವಳಿ ಸರಾಸರಿ 1.63 ಹೆಕ್ಟೇರ್‌ಗೆ ಬಂದಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರದ್ದು ಇನ್ನೂ ಕಡಿಮೆ ಇದೆ. ಮಳೆಯ ಆಶ್ರಯದಲ್ಲಿ 75% ಜನ ರೈತರು ಬದುಕುತ್ತಿದ್ದಾರೆ. ಮತ್ತೆ ಅನೇಕ ಭಾಗಗಳಲ್ಲಿ ಇವತ್ತಿಗೂ ಸಹ ಒಂದೇ ಒಂದು ಬೆಳೆ ಬೆಳೆಯಲಾಗುತ್ತದೆ. ಎರಡು ಬೆಳೆ ಬೆಳೆಯಲಾಗುವುದಿಲ್ಲ.